| | | |
|---|---|---|
| MESCOM | **ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ**<br>(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ) | ಸ್ವಾತಂತ್ರ್ಯದ ಅಮೃತ ಮಹೋತ್ಸವ |

ಸಂಖ್ಯೆ: MESCOM/COML/RA/48/2022-COML cys-6 ದಿನಾಂಕ: 28- 02- 2023

## ಸುತ್ತೋಲೆ

| | |
|---|---|
| ವಿಷಯ: | ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ದರವನ್ನು ಹೊಂದಾಣಿಕೆ ನೀಡುವ ಬಗ್ಗೆ. |
| ಉಲ್ಲೇಖ: | 1. ಕೆ.ಇ.ಆರ್.ಸಿ. ಆದೇಶ ದಿನಾಂಕ 19.09.2022<br>2. ಈ ಕಛೇರಿ ಆದೇಶ ಸಂಖ್ಯೆ I-24853/2022 ದಿನಾಂಕ 21.09.2022<br>3. ಕೆ.ಇ.ಆರ್.ಸಿ. ಆದೇಶ ದಿನಾಂಕ 22-12-2022.<br>4. ಈ ಕಛೇರಿ ಸುತ್ತೋಲೆ ಸಂಖ್ಯೆ CYS 1 ದಿನಾಂಕ 28.12.2022<br>5. ಕೆ.ಇ.ಆರ್.ಸಿ. (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ) (ಮೊದಲನೇ ತಿದ್ದುಪಡಿ) ನಿಬಂಧನೆ 2022 ಅಧಿಸೂಚನೆ ಸಂಖ್ಯೆ ಬಿ/5/12/2807 ಬೆಂಗಳೂರು ದಿನಾಂಕ 23.02.2023<br>**6.** ಆದೇಶ ಸಂಖ್ಯೆ MESCOM-Coml/EBC/263/2021- Coml/I-38685/2023 ದಿನಾಂಕ 28.02.2023 |

1. ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ **19-09-2022** ರ ಆದೇಶದಲ್ಲಿ ದಿನಾಂಕ **01.10.2022** ರಿಂದ **31.03.2023** ಅವಧಿಗೆ ಪ್ರತಿ ಯೂನಿಟ್ಟಿಗೆ **24** (ಇಪ್ಪತ್ತ ನಾಲ್ಕು) ಪೈಸೆಯಂತೆ ಇಂಧನ ಹೊಂದಾಣಿಕೆ ಶುಲ್ಕವನ್ನು ಗ್ರಾಹಕರಿಂದ ವಸೂಲು ಮಾಡಲು ಅನುಮೋದಿಸಿರುತ್ತದೆ.
2. ನಂತರದಲ್ಲಿ ಗೌರವಾನ್ವಿತ ಆಯೋಗವು ದಿನಾಂಕ **22-12-2022** ರ ಆದೇಶದಲ್ಲಿ ದಿನಾಂಕ **01.01.2023** ರಿಂದ **31.03.2023** ಅವಧಿಗೆ ಪ್ರತಿ ಯೂನಿಟ್ಟಿಗೆ **39** (ಮುವತ್ತ ಒಂಭತ್ತು) ಪೈಸೆಯಂತೆ ಇಂಧನ **ಮತ್ತು ವಿದ್ಯುತ್ ಖರೀದಿ ವೆಚ್ಚದ** ದರವನ್ನು ಹೊಂದಾಣಿಕೆ ಮೂಲಕ **ಗ್ರಾಹಕರಿಗೆ ಹಿಂಪಾವತಿಸಲು** ಆದೇಶಿಸಿರುತ್ತದೆ.
3. ಆದ್ದರಿಂದ, ದಿನಾಂಕ **01.01.2023** ರಿಂದ ದಿನಾಂಕ **31.03.2023** ರ ಅವಧಿಯಲ್ಲಿ ಗ್ರಾಹಕರಿಗೆ ನೀಡುವ ಬಿಲ್ಲಿನಲ್ಲಿ ಪ್ರತಿ ಯುನಿಟ್ ಗೆ ನಿವ್ವಳ **15** ಪೈಸೆಯಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆಯಾಗಿ **ಹಿಂಪಾವತಿ ಮಾಡುವಂತೆ ಉಲ್ಲೇಖ (4) ರಲ್ಲಿ ಸುತ್ತೋಲೆ ನೀಡಲಾಗಿರುತ್ತದೆ.**
4. ಇದೀಗ, ಉಲ್ಲೇಖ(5) ರ ನಿಬಂಧನೆಯ ಅನುಸಾರ **ಮಾರ್ಚ್** 2023 ರ **ಅವಧಿಯಲ್ಲಿ** ಪ್ರತಿ ಯುನಿಟ್ ಗೆ ನಿವ್ವಳ **29** ಪೈಸೆಯಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆ ಶುಲ್ಕವನ್ನು ಗ್ರಾಹಕರಿಂದ **ವಸೂಲು ಮಾಡಲು ಉಲ್ಲೇಖ (6) ರಲ್ಲಿ ಆದೇಶಿಸಲಾಗಿದೆ.**
5. ಆದುದರಿಂದ, ಉಲ್ಲೇಖ(4) ರ ಸುತ್ತೋಲೆಯನ್ನು ಭಾಗಶಃ ಮಾರ್ಪಡಿಸಿ, 01.03.2023 **ರಿಂದ** 31.03.2023 ರ **ಅವಧಿಯಲ್ಲಿ ಗ್ರಾಹಕರಿಂದ** ವಸೂಲು ಮಾಡಬೇಕಾದ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆ **ನಿವ್ವಳ ಶುಲ್ಕ** ದರವು ಈ ಕೆಳಗಿನಂತಿದೆ.

| ಅವಧಿ | | ಗ್ರಾಹಕರಿಂದ ವಸೂಲು ಮಾಡಬೇಕಾದ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆ ನಿವ್ವಳ ಶುಲ್ಕ |
|---|---|---|
| ಇಂದ | ವರೆಗೆ | |
| **01.03.2023** | **31.03.2023** | 14 (ಹದಿನಾಲ್ಕು) ಪೈಸೆ ಪ್ರತಿ ಯೂನಿಟ್ಟಿಗೆ |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕವನ್ನು ಗ್ರಾಹಕರಿಗೆ ವಿತರಿಸುವ ಬಿಲ್ಲಿನಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಟಿ.ಆರ್.ಎಂ. ಏಜೆನ್ಸಿಯವರಿಗೆ ಅಗತ್ಯ ನಿರ್ದೇಶನ ನೀಡಿ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಅಧೀಕ್ಷಕ ಇಂಜಿನಿಯರ್ (ವಿ.)(ವಾಣಿಜ್ಯ),
ಮೆಸ್ಕಾಂ, ಕಾರ್ಪೊರೇಟ್ ಕಛೇರಿ,
ಮಂಗಳೂರು.

<u>ಅಗತ್ಯ ಕ್ರಮಕ್ಕಾಗಿ:</u>

1. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವಿಭಾಗಗಳು, ಮೆಸ್ಕಾಂ.
2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಮಾಹಿತಿ ತಂತ್ರಜ್ಞಾನ, ಮೆಸ್ಕಾಂ, ಕಾರ್ಪೊರೇಟ್ ಕಛೇರಿ, ಮಂಗಳೂರು.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಇ.ಬಿ.ಸಿ., ಮೆಸ್ಕಾಂ, ಕಾರ್ಪೊರೇಟ್ ಕಛೇರಿ, ಮಂಗಳೂರು.
4. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ಉಪವಿಭಾಗಗಳು, ಮೆಸ್ಕಾಂ.
5. ಎಲ್ಲಾ ಶಾಖಾಧಿಕಾರಿಗಳು, ಕಾರ್ಯ & ಪಾಲನಾ ಶಾಖೆಗಳು, ಮೆಸ್ಕಾಂ.
6. ಮೆ|| ಝ್ಯುಗಾಕ್ಸ್ ಇನ್ಫೋಟೆಕ್ ಪ್ರೈ.ಲಿ., #8, 1ನೇ ಕ್ರಾಸ್, 2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು-560038

<u>ಪ್ರತಿಗಳು ಮಾಹಿತಿಗಾಗಿ:</u>

1. ಮುಖ್ಯ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವಲಯ, ಮೆಸ್ಕಾಂ, ಮಂಗಳೂರು / ಶಿವಮೊಗ್ಗ.
2. ನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವಲಯ, ಮೆಸ್ಕಾಂ, ಮಂಗಳೂರು / ಶಿವಮೊಗ್ಗ.
3. ನಿಯಂತ್ರಣಾಧಿಕಾರಿಗಳು (ಕಂ. & ಕಾ), ಕಾರ್ಪೊರೇಟ್ ಕಛೇರಿ, ಮೆಸ್ಕಾಂ, ಮಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ.), ಕಾರ್ಯ & ಪಾಲನಾ ವೃತ್ತ, ಮೆಸ್ಕಾಂ.
5. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ & ಪಾಲನಾ ವೃತ್ತ, ಮೆಸ್ಕಾಂ.
6. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಪರಿಶೋಧನೆ), ಕಾರ್ಯ & ಪಾಲನಾ ವಿಭಾಗಗಳು, ಮೆಸ್ಕಾಂ.
7. ವ್ಯನಿ. / ತಾಂ.ನಿ. ಇವರ ಹಿರಿಯ ಆಪ್ತ ಕಾರ್ಯದರ್ಶಿಗಳು,
8. ಮು.ಆ.ಅ. / ಆಸ(ಆಂ.ಪ.) ಇವರ ಆಪ್ತ ಕಾರ್ಯದರ್ಶಿಗಳು,